ಶ್ರೀ ಎಂ. ಪಿ. ಪ್ರಕಾಶ್.—ಅದಕ್ಕೆ ಸ್ವಲ್ಪ ಸಮಯ ಕೇಳಿದ್ದೇನೆ.

ಉಪಾಧ್ಯಕ್ಷರು.—ಅದನ್ನು ತಡೆ ಹಿಡಿಯುತ್ತೇನೆ.

ರಾಬರ್ಟಸನ್ ಪೇಟೆಯಲ್ಲಿ ಕೆ. ಎಸ್. ಆರ್. ಟಿ. ಸಿ. ಬಸ್ ನಿಲ್ದಾಣ ಕಟ್ಟಲು ನೀವೇಶನ ಮಂಜೂರಾತಿ

ಶ್ರೀ ಟಿ. ಎಸ್. ಮಣಿ (ಕೆ. ಜಿ. ಎಫ್).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಬರ್ಟ್ಸನ್ ಪೇಟೆಯಲ್ಲಿ ಟಿ. ಬಿ. ಹಾಗೂ ಸುತ್ತ ಮುತ್ತ ಇರುವ ಜಾಗದಲ್ಲಿ ಬಸ್ ಸ್ಟ್ಯಾಂಡ್ ಕಟ್ಟುವ ಸಲುವಾಗಿ ನಿವೇಶನ ಮಂಜೂರಿಗಾಗಿ ಕೋರಿಕೆಯನ್ನು ಪರಿಗಣಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ ಯಾವಾಗ ಮಂಜೂರಾತಿ ಆಜ್ಞೆ ನೀಡಲಾಗುವುದು ?

ಶ್ರೀ ಎಂ. ಚಂದ್ರಶೇಖರ್. (ನಗರಾಭಿವೃದ್ಧಿ ಸಚಿವರು.).—

ಅ) ಸರ್ಕಾರದ ಮಟ್ಟದಲ್ಲಿ ಯಾವ ಪ್ರಸ್ತಾವನೆಯು ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಟಿ. ಎಸ್. ಮಣಿ.— ನಮ್ಮ ಕೋಲಾರ ಜಿಲ್ಲೆಯಲ್ಲಿ ಕೆ.ಜಿ.ಎಫ್. ಒಂದು ದೊಡ್ಡ ಪಟ್ಟಣವೆಂದೇ ಹೇಳಬಹುದು. ಅಲ್ಲಿ ಒಂದು ಹಳೇ ಟಿ. ಬಿ. ಇದೆ. ಅದನ್ನು ಬಸ್ ಡಿಪೋಗೆ ಕೊಡಬೇಕೆಂದು ಲೋಕೋಪಯೋಗಿ ಸಚಿವರನ್ನು ಕೇಳಿದ್ದೇನೆ. ಸಾರಿಗೆ ಮಂತ್ರಿಗಳು ಕೂಡ ಅಲ್ಲಿ ಒಂದು ಬಸ್ ನಿಲ್ದಾಣವನ್ನು ಮಾಡೋಣವೆಂದು ಹೇಳಿದ್ದಾರೆ. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಇದನ್ನು ಮಾಡಿದರೆ ಒಳ್ಳೆಯದು. ಆದರೆ ಮಂತ್ರಿಗಳು ಉತ್ತರದಲ್ಲಿ ಆ ತರಹ ಏನೂ ಇಲ್ಲವೆಂದು ಹೇಳಿದ್ದಾರೆ. ಈಗಲಾದರೂ ಅದನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.— ಅಲ್ಲಿನ ನಗರ ಸಭೆಯವರು ಹಾಲಿ ಇರುವ ಬಸ್ ಸ್ಟ್ಯಾಂಡನ್ನು ಟಿ. ಬಿ. ಸಮೀಪದ ಖಾಲಿ ನಿವೇಶನಕ್ಕೆ ಬದಲಾವಣೆ ಮಾಡಬೇಕೆಂದು ನಿರ್ಣಯ ಮಾಡಿದ್ದಾರೆ. ಅದು ಸರ್ಕಾರಕ್ಕೆ ಬಂದ ಮೇಲೆ ಸರ್ಕಾರದ ಮಟ್ಟದಲ್ಲಿ ಕ್ರಮ ಕೈಗೊಳ್ಳುತ್ತೇವೆ. ನಮ್ಮ ಕಮೀಷನರ್‌ರವರಿಗೆ ಹೇಳಿ ಈ ಪ್ರಸ್ತಾವನೆಯನ್ನು ತರಿಸಿಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.— ಕೆ.ಜಿ.ಎಫ್. ಬಸ್ ಸ್ಟ್ಯಾಂಡನ್ನು ತಾವು ನೋಡಿದ್ದೀರಿ. ಅದು ಎಷ್ಟು ಕಿಷ್ಕಿಂದವಾಗಿದೆ ಎಂಬುದು ಗೊತ್ತಿದೆ. ಅಲ್ಲಿ ಜನರು ನಿಂತುಕೊಳ್ಳುವುದಕ್ಕೂ ಸಹ ಜಾಗ ಇರುವುದಿಲ್ಲ. ದಯವಿಟ್ಟು ಅದನ್ನು ಬದಲಾಯಿಸುವುದಕ್ಕೆ ವ್ಯವಸ್ಥೆ ಮಾಡಿ. ಟಿ.ಬಿ. ಹತ್ತಿರ ಬೇಕಾದಷ್ಟು ಖಾಲಿ ಜಾಗ ಇದೆ. ಅದನ್ನು ಕೊಟ್ಟರೆ ಕೆ.ಎಸ್.ಆರ್.ಟಿ.ಸಿ.ಯವರಿಗೆ ಅನುಕೂಲವಾಗುತ್ತದೆ. ಅಲ್ಲಿಗೆ ಬಸ್ ಸ್ಟ್ಯಾಂಡನ್ನು ಬದಲಾಯಿಸುವುದಕ್ಕೆ ಪರ್ಮಿಟ್ ಕೊಡುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.— ಅದು ಮುನಿಸಿಪಾಲಿಟಿಯವರ ಜಮೀನು. ಅವರು ಕೊಡಬೇಕು ಅದಕ್ಕೆ ಒಂದು ಬೆಲೆ ನಿಗಧಿ ಆಗಬೇಕು. ಅದನ್ನು ಕೆ ಎಸ್ ಆರ್.ಟಿ.ಸಿ.ಯವರು ಕೊಡಬೇಕು. ಆದಾದ ಮೇಲೆ ಪರ್ಮಾವಣೆ ಮಾಡಬೇಕು. ಅದನ್ನು ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.— ಯಾವಾಗ ಮಾಡುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.— ಅದು ಬರಲಿ.

ಶ್ರೀ ಆರ್. ವೆಂಕಟರಾಮಯ್ಯ.— ಬಂದಿದೆ ಎಂದು ತಾವು ಒಪ್ಪಿಕೊಂಡಿರಿ.

ಶ್ರೀ ಎಂ. ಚಂದ್ರಶೇಖರ್.— ಸರ್ಕಾರಕ್ಕೆ ಇನ್ನೂ ಬಂದಿಲ್ಲ. ಅಲ್ಲಿ ತೀರ್ಮಾನವಾಗಿದೆ ಅಷ್ಟೆ.